# ಮಕ್ಕಳನ್ನು ಅತಿಯಾಗಿ ಮುದ್ದಿಸ್ತೀರಾ..?

ಮಕ್ಕಳನ್ನು ಪ್ರೀತಿಸುವುದು ತಪ್ಪಲ್ಲ. ಆದರೆ ಅದು ಅತಿಯಾಗಬಾರದು. ಇಂದಿನ 'ಆಧುನಿಕ ಮಕ್ಕಳ' ಮನೋಸ್ಥಿತಿ, ಅವರು ತೆಗೆದುಕೊಳ್ಳುವ ನಿರ್ಧಾರ, ಪೋಷಕರ ಒತ್ತಾಸೆ, ಸಮಾಜದ ಒತ್ತಡ ಎಲ್ಲವೂ ಸೇರಿ ಮಕ್ಕಳು ಭವಿಷ್ಯದ ಬಗ್ಗೆ ಒಂದು ದಿಟ್ಟ ನಿಲುವು ತಳೆಯಲು ಕೆಲವೊಮ್ಮೆ ಅಸಮರ್ಥರಾಗುತ್ತಾರೆ. ಮಕ್ಕಳನ್ನು ಅತಿಯಾಗಿ ಮುದ್ದಿಸಿದರೆ ಏನಾಗುತ್ತದೆ? ಇಲ್ಲಿದೆ ಒಂದು ವಿಶ್ಲೇಷಣಾತ್ಮಕ ಅವಲೋಕನ...

**■ ಸವಿತಾ ಶಾಂತಪ್ರಿಯ, ಉಡುಪಿ**

ಇತ್ತೀಚೆಗೆ ನನ್ನ ಮೊಬೈಲ್‌ಗೆ ಸ್ನೇಹಿತರೊಬ್ಬರು ಫಾರ್ವರ್ಡ್ ಮಾಡಿದ ಮೆಸೇಜ್ ಒಂದು ನನ್ನನ್ನು ಚಿಂತೆಗೀಡು ಮಾಡಿತ್ತು. ಆ ಸಂದೇಶದ ಸಾರಾಂಶ ಇಷ್ಟೆ.. ಇಂದು ಓದುವ ನೆಪದಲ್ಲೋ, ಪ್ರೀತಿಯ ನೆಪದಲ್ಲೋ, ನಾವು ಪೋಷಕರು ಮಕ್ಕಳನ್ನು ಅತಿ ಪ್ರೀತಿಯಿಂದ ಸಾಕುತ್ತೇವೆ. ಮಕ್ಕಳ ಪ್ರತಿಯೊಂದು ಕೆಲಸದಲ್ಲೂ ಸಹಕರಿಸುತ್ತಲೇ ಇರುತ್ತೇವೆ. ಹೋಂವರ್ಕ್‌ನಿಂದ ಹಿಡಿದು ಅಸೈನ್ಮೆಂಟ್, ಪ್ರಾಜೆಕ್ಟ್ ತಯಾರಿಯಲ್ಲಿ ಪೋಷಕರದೇ ಸಿಂಹಪಾಲು. ಪದವಿ ತರಗತಿಯಲ್ಲಿದ್ದರೂ ಉಂಡ ತಟ್ಟೆಯನ್ನೂ ತೊಳೆಸದೆ, ತೊಟ್ಟ ಬಟ್ಟೆಯನ್ನೂ ಒಗೆಯಲು ಬಿಡದೆ ಸಾಕಷ್ಟು ಓದಲಿ, ಸಾಧಿಸಲಿ ಎಂದು ಹುರಿದುಂಬಿಸುವ ಪೋಷಕರೇ ಹೆಚ್ಚು. ಆದರೂ ಇಂದಿನ ಮಕ್ಕಳ ಸಾಧನೆ ಅಷ್ಟಕ್ಕಷ್ಟೆ ಎಂಬಂತೆ ಒಂದಿಷ್ಟು ಅಂಕಿ ಅಂಶಗಳ ವಿವರಗಳಿದ್ದವು.

ಈ ನಿಟ್ಟಿನಲ್ಲಿ ಯೋಚಿಸಿದಾಗ ನನಗನಿಸಿದ್ದು ಇಂದು ಮಕ್ಕಳಿಗಾಗಿ ಇಷ್ಟೆಲ್ಲಾ ಮಾಡುವ ಪೋಷಕರು ವೈದ್ಯರೋ, ನ್ಯಾಯವಾದಿಗಳೋ, ಎಂಜಿನಿಯರೋ ಅಥವಾ ಇನ್ನೇನೋ ಆಗಿ ಉನ್ನತ ಸ್ಥಾನದಲ್ಲಿರಬಹುದು. ಆದರೆ ಈ ಸ್ಥಾನ ತಲುಪಬೇಕಿದ್ದರೆ ಅವರಲ್ಲಿ ಅನೇಕರು ಅದೆಷ್ಟು ಕಷ್ಟಪಟ್ಟಿರಬಹುದು. ಅಂದಿನ ತಮ್ಮ ಆಸಕ್ತಿಯನ್ನು ಹುಡುಕಿಕೊಂಡು ಅದನ್ನು ಸಾಧಿಸುವಲ್ಲಿ ಸತತ ಪ್ರಯತ್ನವನ್ನು ಮಾಡಿ ಗುರಿ ತಲುಪಿದವರು. ಎಷ್ಟೋ ಜನ ಬರಿಗಾಲಲ್ಲೇ ನಡೆದು, ವಿದ್ಯಾಭ್ಯಾಸದ ಖರ್ಚು ಭರಿಸುವುದಕ್ಕಾಗಿ ಹೋಟೆಲುಗಳಲ್ಲಿ ಮಾಣಿಯಾಗಿಯೋ, ಮನೆ ಮನೆಗೆ ಪೇಪರ್ ಹಾಕಿಯೋ, ಕೃಷಿ ಕೆಲಸದಲ್ಲಿ ಸಹಕರಿಸಿಯೋ ಸಂಪಾದಿಸಿ ವಿದ್ಯೆ ಕಲಿಯುತ್ತಿದ್ದವರೆ ಹೆಚ್ಚು ಎಂದು ನಮ್ಮ ಹಿಂದಿನವರು ಹೇಳುತ್ತಿದ್ದದ್ದು ಈಗಲೂ ನೆನಪಿದೆ.

ಆದರೆ ಇಷ್ಟೆಲ್ಲಾ ಕಷ್ಟ ಪಟ್ಟ ತಂದೆ ತಾಯಿ ತಾವು ಕಷ್ಟ ಪಟ್ಟಂತೆ ನಮ್ಮ ಮಕ್ಕಳು ಕಷ್ಟಪಡಬಾರದು ಎಂದು ಕೇಳಿದ್ದನ್ನೆಲ್ಲ ಕೊಡಿಸುವ ಚಟಕ್ಕೆ ಬಿದ್ದಂತೆ ಅನ್ನಿಸುತ್ತದೆ. ಇಬ್ಬರು ದುಡಿಯುತ್ತಿದ್ದರಂತೂ ಮಕ್ಕಳಿಗೆ ಕೊಡಲಾಗದ ಸಮಯವನ್ನು ಅವರಿಗೆ ಬೇಕಾದ ಆಟಿಕೆ ತಿಂಡಿ ಕೊಡಿಸುವ ಮೂಲಕ ತೃಪ್ತಿ ಕಾಣುವವರು ಅನೇಕರು. ತಮ್ಮ ಬಾಲ್ಯವನ್ನು ನೆನೆದು ತಾನು ಕಲಿಯಲು ಆಗದ್ದನ್ನು ನನ್ನ ಮಗನೋ ಮಗಳೋ ಕಲಿಯಲಿ ಎಂದು ಹುರಿದುಂಬಿಸಿ ಅವರಿಗಾಗಿ ಕಷ್ಟ ಪಡುವವರು ಇನ್ನೂ ಹಲವರು. ಎಲ್ಲಿ ಬೇಕೆಂದರಲ್ಲಿ ಮಕ್ಕಳನ್ನು ಕರಕೊಂಡು ಹೋಗಿ ಅವರನ್ನು ಇದ್ದ ಬದ್ದ ತರಗತಿಗಳಿಗೆ ಸೇರಿಸಿ ಸಾಲವೋ ಮೂಲವೋ ಅವರು ಏನನ್ನಾದರೂ ಸಾಧಿಸುವಂತೆ ಮಾಡಿ ತೃಪ್ತಿಕಾಣುವವರು ಇನ್ನು ಕೆಲವರು. ಇಷ್ಟು ಮಾಡಿದರೂ ಸಾಧನೆಯ ಮಾನದಂಡ ಹಳೆಯದೇ. ಅದನ್ನು ಮೀರಿಸುವುದು ಇಂದಿನ ಜನಾಂಗಕ್ಕೆ ಸಾಧ್ಯವಾಗಿಲ್ಲ. ಇಂದಿಗೂ ಎಂಜಿನಿಯರಾಗಿ ಕಾಣಸಿಗುವುದು ವಿಶ್ವೇಶ್ವರಯ್ಯನ ವರೇ, ಕವಿಯಾಗಿ ಸಿಗುವುದು ಬೇಂದ್ರೆಯೋ, ಡಿವಿಜಿಯವರೇ. ಸಂಗೀತ ಅಂದರೆ ಸುಬ್ಬುಲಕ್ಷ್ಮಿ ಅವರ ಸುಮಧುರ ನಾದ ಮಾಧುರ್ಯವೇ. ಅಂದರೆ ಇಂದಿನ ಮಕ್ಕಳ ಸಾಧನೆಯ ಸಾಮರ್ಥ್ಯ ಎಷ್ಟಿದೆ? ಹೇಗಿದೆ? ಅಷ್ಟೆಲ್ಲ ಸಾಧಿಸಿದ ಅವರು ಬಾಲ್ಯದಲ್ಲಿ ಇಷ್ಟು ಸುಖವಾಗಿ ಬೆಳೆದಿದ್ದರೇ?

ಸುಮಾರು ನಾಲ್ಕೈದು ದಶಕಗಳ ಹಿಂದಿನ ಪರಿಸ್ಥಿತಿ ಈ ರೀತಿ ಇರಲಿಲ್ಲ. ಅದಕ್ಕಿಂತ ಹಿಂದಿನ ಪರಿಸ್ಥಿತಿಯಂತೂ ಇನ್ನೂ ಕಷ್ಟಕರವೇ ಹೌದು. ಜೀವನದಲ್ಲಿ ಅಪ್ರತಿಮ ಸಾಧನೆಯನ್ನು ಮಾಡಿದ ಹಿರಿಯರ ಜೀವನ ಚರಿತ್ರೆಯನ್ನು ಓದಿದರೆ ತಿಳಿಯುತ್ತದೆ ಅವರ ಬಾಲ್ಯ ಹೂವಿನ ಹಾಸಿಗೆಯಾಗಿರಲಿಲ್ಲವೆಂಬುದು. ಆದರೆ ಆ ಕಷ್ಟಕಾರ್ಪಣ್ಯಗಳ ನಡುವೆಯೂ ಅವರು ತಮ್ಮ ಗುರಿ ಮರೆಯಲಿಲ್ಲ, ಛಲ ಬಿಡಲಿಲ್ಲ. ಛಲ ಬಿಡದ ತ್ರಿವಿಕ್ರಮನಂತೆ ಸಾಧಿಸಿ ಗುರಿ ಮುಟ್ಟಿದವರು.

ಈ ವರ್ಷವಷ್ಟೇ ಕಾಲೇಜಿಗೆ ಸೇರಿದ ನನ್ನ ಮಗ ತನ್ನ ಬಟ್ಟೆಗೆ ತಾನೇ ಇಸ್ತ್ರಿ ಮಾಡುತ್ತಿದ್ದುದನ್ನು ನೋಡಿದ ನನ್ನಮ್ಮ 'ಏನೇ ನಿಂಗಷ್ಟೂ ಮಾಡಿಕೊಡ ಬಾರದಾ?' ಎಂದು ಕೇಳಿದ್ದರು. 'ಅವನೂ ಕಲಿಯಲಿ. ಮಾಡಿಕೊಳ್ಳಲಿ ಎಂದೇ ಬಿಟ್ಟಿದ್ದೇನೆ' ಎಂದು ಉತ್ತರಿಸಿದ್ದೆ. ನನ್ನ ನಿರ್ಧಾರ ಅವರಿಗೆ ಸರಿ ಅನ್ನಿಸಿದಂತೆ ಕಾಣಲಿಲ್ಲ. ಆದರೆ ನನ್ನ ಸ್ನೇಹಿತೆಯೊಬ್ಬರು ಆಕೆಯ ಪದವಿ ತರಗತಿಯಲ್ಲಿ ಓದುತ್ತಿದ್ದ ಮಗ ಆಕೆ ಆತನ ಬಟ್ಟೆಗೆ ಇಸ್ತ್ರಿ ಮಾಡಿಟ್ಟಿಲ್ಲವೆಂದು ಬೈಯ್ದು. ಕೊನೆಗೆ ಯಾವುದೋ ಒಂದು ಶರ್ಟ್ ತೊಟ್ಟುಕೊಂಡು ಹೋದ ಎಂದು ದುಃಖ ತೋಡಿಕೊಂಡಾಗ ನನ್ನ ನಿರ್ಧಾರ ಸರಿಯೆಂಬುದು ಇನ್ನಷ್ಟು ಗಟ್ಟಿಯಾಯಿತು. ಇಲ್ಲಿ ಬಟ್ಟೆಗೆ ಇಸ್ತ್ರಿ ಒಂದು ಸಾಂದರ್ಭಿಕ ಉದಾಹರಣೆ ಅಷ್ಟೆ. ಇದೇ ತತ್ವ ಎಲ್ಲ ಹಂತಗಳಲ್ಲೂ ಅನ್ವಯವಾಗುತ್ತದೆ ಎಂಬುದು ಗಮನದಲ್ಲಿಡಬೇಕಾದ ಅಂಶ.

ನಮ್ಮ ಬಾಲ್ಯದಲ್ಲಿ ನಮ್ಮಜ್ಜಿ ನಮ್ಮ ಲೋಟ ತಟ್ಟೆ ಎತ್ತಿ ಮುದ್ದು ಮಾಡುತ್ತಿದ್ದುದನ್ನು ಕಂಡು ನಮ್ಮಮ್ಮ ಕೆಂಡಾಮಂಡಲವಾಗುತ್ತಿದ್ದುದು

